RNU AIR DHARWAD

DECEMBER 27, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಕಾರವಾರದ, ಸೀ ಬರ್ಡ್ ನೌಕಾನೆಲೆಗೆ, ರಾಷ್ಟ್ರಪತಿ ದ್ರೌಪದಿ ಮುರ್ಮು, ನಾಳೆ ಭೇಟಿ.**

**2030ಕ್ಕೆ, ಪ್ರಯಾಣಿಕರಿಗೆ ಸಕಲ ಸೌಲಭ್ಯ ಕಲ್ಪಿಸುವ ಗುರಿಯೊಂದಿಗೆ, ರೇಲ್ವೆ ಸಾಮರ್ಥ್ಯ ವಿಸ್ತರಣೆ ಯೋಜನೆ.**

**ಧಾರವಾಡದಲ್ಲಿ, ಇಂದಿನಿಂದ ಐದು ದಿನಗಳ, ಅಂತರಂಗದ ನಡಿಗೆ; ಕೇಂದ್ರದ ಕ್ಷಮತಾ ಆಯೋಗದ ತಜ್ಞ ಸದಸ್ಯ ಆರ್. ಬಾಲಸುಬ್ರಹ್ಮಣ್ಯಂ ನೇತೃತ್ವ.**

**ಮನ್ ಕಿ ಬಾತ್; ನಾಳೆ ಬೆಳಗ್ಗೆ 11 ಗಂಟೆಗೆ, ದೇಶದ ಜನತೆಯನ್ನುದ್ದೇಶಿಸಿ, ಪ್ರಧಾನಮಂತ್ರಿ ಭಾಷಣ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಷ್ಟ್ರಪತಿ ದ್ರೌಪದಿ ಮುರ್ಮು, ಇಂದಿನಿಂದ ನಾಲ್ಕು ದಿನಗಳ ಕಾಲ ಗೋವಾ, ಕರ್ನಾಟಕ ಮತ್ತು ಜಾರ್ಖಂಡ್ ರಾಜ್ಯಗಳಿಗೆ ಭೇಟಿ ನೀಡಲಿದ್ದಾರೆ. ನಾಳೆ ಉತ್ತರಕನ್ನಡ ಜಿಲ್ಲೆ, ಕಾರವಾರದ, ಸೀ ಬರ್ಡ್ ನೌಕಾ ನೆಲೆಗೆ ಅವರು ಭೇಟಿ ನೀಡಲಿದ್ದಾರೆ. ರಾಷ್ಟ್ರಪತಿಯವರ ಭೇಟಿ ಹಿನ್ನೆಲೆ, ಭಾನುವಾರ ಬೆಳಗ್ಗೆಯಿಂದ, ಮಧ್ಯಾಹ್ನ 3.30ರ ವರೆಗೆ, ಹಾರವಾಡದಿಂದ ಮಾಜಾಳಿಯ ವರೆಗಿನ ಸಮುದ್ರ ತೀರದಲ್ಲಿ, ಮೀನುಗಾರಿಕೆಯನ್ನು ನಿರ್ಬಂಧಿಸಲಾಗಿದೆ ಎಂದು, ಮೀನುಗಾರಿಕೆ ಇಲಾಖೆಯ, ಜಂಟಿ ನಿರ್ದೇಶಕರು ತಿಳಿಸಿದ್ದಾರೆ.**

<><><>

**ಗ್ರಾಮೀಣ ಕೂಲಿ ಕಾರ್ಮಿಕರ ಹಾಜರಾತಿಯ, ಬಯೋಮೆಟ್ರಿಕ್ ದೃಢೀಕರಣ, ಮೊಬೈಲ್ ಆಧಾರಿತ ಮೇಲ್ವಿಚಾರಣೆ, ಸಶಕ್ತ ಸಾಮಾಜಿಕ ಲೆಕ್ಕ ಪರಿಶೋಧನಾ ಕಾರ್ಯ ವಿಧಾನದೊಂದಿಗೆ, ನೂತನ ಕಾಯ್ದೆ, ವಿಕಸಿತ ಭಾರತ 2047: 'ಜಿ ರಾಮ ಜಿ'ಯನ್ನು, ಕೇಂದ್ರ ಸರ್ಕಾರ ಅನುಷ್ಠಾನಗೊಳಿಸಿದೆ. ಮಹಾತ್ಮ ಗಾಂಧಿ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ**

ಯೋಜನೆಯನ್ನು, ಕೇಂದ್ರ ಸರ್ಕಾರ, ವಿಕಸಿತ ಭಾರತ 2047; ಗ್ರಾಮೀಣ ರೋಜ್‌ಗಾರ್ ಮತ್ತು ಆಜೀವಿಕಾ ಮಿ ’ನ್, ವಿ.ಬಿ; ಜಿ ರಾಮ ಜಿ, ಎಂದು ಮರು ನಾಮಕರಣ ಮಾಡಿದೆ. ವಿಕಸಿತ ಭಾರತ ಜಿ–ರಾಮ್–ಜಿ ಯೋಜನೆ ಕುರಿತು, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ವಿಜಯಪುರ ಜಿಲ್ಲೆ, ನಿಡಗುಂದಿ ತಾಲೂಕು, ಚಿಮ್ಮಲಗಿ ಗ್ರಾಮದ ಫಲಾನುಭವಿ ಭುವನೇಶ್ವರಿ.

<><><>

ಭುವನೇಶ್ವರಿ ಧ್ವನಿ – 26 ಸೆಕೆಂದುಗಳು

<><><>

ಭಾರತೀಯ ರೇಲ್ವೆ, ಮುಂದಿನ ಐದು ವ ’ಗಳಲ್ಲಿ, ಬೆಂಗಳೂರು, ಮೈಸೂರು ಸೇರಿ, ದೇಶದ 48 ಪ್ರಮುಖ ನಗರಗಳಲ್ಲಿ, ರೈಲುಗಳ ಮೂಲ ಸಾಮರ್ಥ್ಯವನ್ನು ದ್ವಿಗುಣಗೊಳಿಸುವ ಗುರಿ ಹೊಂದಿದೆ. ಮಹತ್ವಾಕಾಂಕ್ಷಿ, ರೇಲ್ವೆ ಸಾಮರ್ಥ್ಯ ವಿಸ್ತರಣಾ ಯೋಜನೆ ಅಡಿ, 2030ರ ವೇಳೆಗೆ ಹಂತ ಹಂತವಾಗಿ, ರೇಲ್ವೆ ಪ್ರಯಾಣಿಕರ ಸಂಖ್ಯೆಯ ಹೆಚ್ಚಳಕ್ಕೆ ಅನುಗುಣವಾಗಿ, ಹೆಚ್ಚುವರಿ ಪ್ಲಾಟ್ ಫಾರ್ಮ ನಿರ್ಮಾಣ, ಹೊಸ ಟರ್ಮಿನಲ್ ಸೌಕರ್ಯ, ಮೆಗಾ ಕೋಚ್ ನಿರ್ಮಾಣ ಸಂಕೀರ್ಣ ರೂಪಿಸಲು, ಯೋಜಿಸಲಾಗಿದೆ. ಈ ಮಧ್ಯೆ, ಹೊಸ ವರ್ಷ 2026 ರ, ಜನೆವರಿ 13 ರಿಂದ, ಫೆಬ್ರುವರಿ 28ರ ಮಧ್ಯೆ, ಹಬ್ಬಗಳ ಪ್ರಯುಕ್ತ, ದೇಶದ ವಿವಿಧೆಡೆ, ಒಟ್ಟು 17 ಸಾವಿರದ 340 ವಿಶೇಷ ರೈಲು ಸೇವೆಗಳನ್ನು ಒದಗಿಸಲು, ರೇಲ್ವೆ ಇಲಾಖೆ ಸಿದ್ಧತೆ ಕೈಗೊಂಡಿದೆ.

<><><>

ಪ್ರತಿ ದಿನ ಸಂಗೀತ ಆಲಿಸುವುದರಿಂದ, ಮನಃಶಾಂತಿ ದೊರೆಯುತ್ತದೆ; ಆರೋಗ್ಯವೂ ವೃದ್ಧಿಸುತ್ತದೆ ಎಂದು, ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ, ಆರ್. ವಿ. ದೇಶಪಾಂಡೆ ತಿಳಿಸಿದ್ದಾರೆ. ಉತ್ತರಕನ್ನಡ ಜಿಲ್ಲೆ, ಕಾರವಾರದ, ರವೀಂದ್ರನಾಥ ಟ್ಯಾಗೋರ್ ಕಡಲ ತೀರದ, ಮಯೂರ ವರ್ಮ ವೇದಿಕೆಯಲ್ಲಿ ಆಯೋಜಿಸಿದ್ದ, ಕರಾವಳಿ ಉತ್ಸವದಲ್ಲಿ ಪಾಲ್ಗೊಂಡು, ಮಾತನಾಡಿದರು. 1992 ರಲ್ಲಿ ಕರಾವಳಿ ಉತ್ಸವ ಆಚರಣೆಗೆ ಚಾಲನೆ ನೀಡಲಾಗಿತ್ತು. ಅನ್ಯಾನ್ಯ ಕಾರಣಗಳಿಂದ, ನಿಂತುಹೋಗಿದ್ದ, ಕರಾವಳಿ ಉತ್ಸವಕ್ಕೆ, ಜನೋತ್ಸವದ ಮೆರುಗಿನೊಂದಿಗೆ, ಚಾಲನೆ ನೀಡಿ, ಪ್ರಸಕ್ತ 18ನೇ ಉತ್ಸವ ಆಚರಿಸಲಾಗುತ್ತಿದೆ ಎಂದರು.

<><><>

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ, ಗಾಂಧಿ ಕೃಷಿ ವಿಜ್ಞಾನ ಕೇಂದ್ರದ, ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಮಾವೇಶ ಭವನದಲ್ಲಿ, ಜಿ.ಕೆ.ವಿ.ಕೆ.ಯಲ್ಲಿ, ಇಂದು ಬೆಳಗ್ಗೆ 10–30ಕ್ಕೆ, ರೈತ ದಿನಾಚರಣೆ, ಆಯೋಜಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಚಾಲನೆ ನೀಡಲಿದ್ದಾರೆ. ರೈತರು ಹಾಗೂ ಬೆಂಗಳೂರು ಗ್ರಾಹಕರ ನಡುವೆ, ನೇರ ಸಂಪರ್ಕ ಕಲ್ಪಿಸಲು, ಬೆಳಗ್ಗೆ 7 ಗಂಟೆಯಿಂದ ಸಂಜೆ 4 ಗಂಟೆಯ ವರೆಗೆ, ಕೃಷಿ ಸಂತೆ, ಜರುಗಲಿದೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

'ನಮ್ಮ ನಡೆ, ಅಂತರಂಗದೆಡೆಗೆ' ಎಂಬ, *ವಾಕ್ ವಿಥಿನ್ 2025,* ವಿಶಿಷ್ಟ ಪಾದಯಾತ್ರೆ, ಇಂದಿನಿಂದ, ಬುಧವಾರ 31ನೇ ತಾರೀಖಿನ ವರೆಗೆ, ಐದು ದಿನಗಳ ಕಾಲ, ಧಾರವಾಡ ಹಾಗೂ ಸುತ್ತಲಿನ ಆಯ್ದ ಕೆಲ ಹಳ್ಳಿಗಳಲ್ಲಿ, ಗ್ರಾಮ ವಾಸ್ತವ್ಯದ ಮೂಲಕ, ನಡೆಯಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ದೂರದೃಷ್ಟಿಯ, ಕರ್ಮಚಾರಿಗಳಿಂದ ಕರ್ಮಯೋಗಿಗಳಾಗಿ, ಕಾರ್ಯಾಂಗದ ಚುಕ್ಕಾಣಿ ಹಿಡಿದ, ಅಧಿಕಾರಿಗಳನ್ನು ರೂಪಿಸುವ, ಮಿಷನ್ ಕರ್ಮಯೋಗಿ ಅಭಿಯಾನದ ಭಾಗವಾದ, ಸಾಮರ್ಥ್ಯ ಅಭಿವೃದ್ಧಿ ಆಯೋಗ, 'ಸಕ್ಷಮ'ದ ತಜ್ಞ ಸದಸ್ಯ, ಆರ್. ಬಾಲಸುಬ್ರಹ್ಮಣ್ಯಂ, ವಾಕ್ ವಿಥಿನ್, ನೇತೃತ್ವ ವಹಿಸಲಿದ್ದಾರೆ. ಮೂಲತಃ ಕಲಬುರಗಿಯವರಾದ, ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಚಿಕಿತ್ಸಾ ಆಸ್ಪತ್ರೆಯ, ವಿಶ್ರಾಂತ ನಿರ್ದೇಶಕಿ, ಪದ್ಮಶ್ರೀ ಪುರಸ್ಕೃತ, ವಿಜಯಲಕ್ಷ್ಮೀ ದೇಶಮಾನೆ, ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಉಪ ಕುಲಪತಿ ಪಿ.ಎಲ್. ಪಾಟೀಲ ಸೇರಿದಂತೆ, ಅನೇಕ ಗಣ್ಯರು, ಧಾರವಾಡದ ಮನೋ ಆರೋಗ್ಯ ಹಾಗೂ ನರ ವಿಜ್ಞಾನಗಳ ಸಂಸ್ಥೆ – ಡಿಮ್ಹಾನ್ಸ್ ಸಭಾಂಗಣದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ಐದು ದಿನಗಳ, ವಾಕ್ ವಿಥಿನ್ ನಡಿಗೆಗೆ ಚಾಲನೆ ನೀಡಲಿದ್ದಾರೆ. ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ಉಪಶಮನ ಆರೈಕೆ ಪ್ರಕಲ್ಪದ, ಹಿರಿಯ ಪ್ರಬಂಧಕ, ಡಾಕ್ಟರ್ ಮೋಹನಕುಮಾರ ಥಂಬದ, ಅಂತರಂಗದ ನಡಿಗೆ ಬಗ್ಗೆ, ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ ಮೋಹನ ಕುಮಾರ ಥಂಬದ ಧ್ವನಿ – 35 ಸೆಕೆಂದುಗಳು

<><><>

ಅಂತಾರಾಷ್ಟ್ರೀಯ ಸ್ವಯಂಸೇವಾ ಸಂಸ್ಥೆ, ಎಡೆಲ್‌ಗಿವ್ ಫೌಂಡೇಷನ್, ಧಾರವಾಡ ತಾಲೂಕು, ಕಲಕೇರಿ ಗ್ರಾಮದ, ಕಾನನದ ವಿಶಿಷ್ಟ ಸಂಗೀತ ಶಾಲೆ, ಕಲಕೇರಿ ಸಂಗೀತ ವಿದ್ಯಾಲಯದಲ್ಲಿ ವ್ಯಾಸಂಗ ನಿರತ, 220ಕ್ಕೂ ಹೆಚ್ಚು ಮಕ್ಕಳಿಗೆ, ಸಹಾಯಹಸ್ತ ಚಾಚಿದೆ ಎಂದು, ಶಾಲೆಯ ಪ್ರಾಚಾರ್ಯ ಆಡಮ್ ವುಡ್‌ವರ್ಡ್ ತಿಳಿಸಿದ್ದಾರೆ. ತನ್ನಿಮಿತ್ತ ಇಂದು, ಕಲಕೇರಿ ಸಂಗೀತ ವಿದ್ಯಾಲಯದಲ್ಲಿ, ಬೆಳಗ್ಗೆ 10 ರಿಂದ ಮಧ್ಯಾಹ್ನ 12 ಗಂಟೆ 30 ನಿಮಿಷದ ವರೆಗೆ, 'ಸುಭಹ ಕೇ ರಾಗ್' ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಆಯೋಜಿತವಾಗಿದೆ ಎಂದು, ಶಾಲೆಯ ಸಾರ್ವಜನಿಕ ಸಂಪರ್ಕ ನಿರ್ದೇಶಕ, ವೀರಣ್ಣ ಪತ್ತಾರ ಧಾರವಾಡದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ, ಮಾಹಿತಿ ನೀಡಿದರು.

<><><>

ಇಂದು, ಸಾಂಕ್ರಾಮಿಕ ರೋಗಗಳನ್ನು ತಡೆಯುವ, ಅಂತಾರಾಷ್ಟ್ರೀಯ ಸನ್ನದ್ಧತೆ ದಿನಾಚರಣೆ. ಸಾಂಕ್ರಾಮಿಕ ರೋಗಗಳು ಹಬ್ಬಿ, ಹರಡುವುದನ್ನು ತಡೆಯಲು, ಸುರಕ್ಷಿತ ಆರೋಗ್ಯ ವ್ಯವಸ್ಥೆ ಖಾತ್ರಿಪಡಿಸಿ, ಮನುಷ್ಯರು, ಪ್ರಾಣಿಗಳು ಹಾಗೂ ಸಸ್ಯ ಸಂಕುಲವನ್ನು ಒಳಗೊಂಡಂತೆ, ಸಮಗ್ರ ಆರೋಗ್ಯ ಕಾಳಜಿಗಾಗಿ, ಜಾಗತಿಕ ಸಹಭಾಗಿತ್ವ ಹೊಂದುವುದು, ಸಾಂಕ್ರಾಮಿಕ ರೋಗಗಳನ್ನು ತಡೆಯುವ, ಅಂತಾರಾಷ್ಟ್ರೀಯ ಸನ್ನದ್ಧತೆ ದಿನಾಚರಣೆಯ, ಉದ್ದೇಶ.

<><><>

ಆಕಾಶವಾಣಿಯ, ಬಹುಶ್ರುತ, 'ಮನ್ ಕಿ ಬಾತ್' ಕಾರ್ಯಕ್ರಮ, ನಾಳೆ 28ರಂದು, ಭಾನುವಾರ ಬೆಳಗ್ಗೆ 11 ಗಂಟೆಗೆ ಪ್ರಸಾರವಾಗಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, 129 ನೇ ಆವೃತ್ತಿಯ ಮನದ ಮಾತಿನಲ್ಲಿ ದೇಶ,

ವಿದೇಶಗಳಲ್ಲಿರುವ ಭಾರತೀಯರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಎಲ್ಲ ಆಕಾಶವಾಣಿ ಕೇಂದ್ರಗಳು, ದೂರದರ್ಶನ ವಾಹಿನಿ ಹಾಗೂ ಪಿ.ಎಂ.ಒ ಕಚೇರಿಯ ಯೂಟ್ಯೂಬ್ ವಾಹಿನಿ ಮೂಲಕ, 'ಮನ್ ಕಿ ಬಾತ್' ಪ್ರಸಾರವಾಗಲಿದೆ.

<><><>

'ಸಂಸದರ ಕ್ರೀಡಾ ಮಹೋತ್ಸವ – 2025', 'ಆಟವಾಡಲಿ ಭಾರತ, ಅರಳಲಿ ಭಾರತ' ಎಂಬ ಧ್ಯೇಯದೊಂದಿಗೆ, 2026ರ ಜನವರಿ 25ರ ವರೆಗೆ, ಒಂದು ತಿಂಗಳ ಕಾಲ, ಆಯೋಜಿತವಾಗಿದೆ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ತಿಳಿಸಿದ್ದಾರೆ. ಧಾರವಾಡ ಜಿಲ್ಲೆ, ಕುಂದಗೋಳ ತಾಲೂಕು, ವಿಧಾನಸಭಾ ಕ್ಷೇತ್ರದಲ್ಲಿ, ಸಂಸದ್ ಕ್ರೀಡಾ ಮಹೋತ್ಸವಕ್ಕೆ ಚಾಲನೆ ನೀಡಿ, ಬಳಿಕ, ವಿಜೇತರಿಗೆ ಪ್ರಶಸ್ತಿ ನೀಡಿ, ಅವರು ಗೌರವಿಸಿದರು.

<><><>

ಮಂಗಳೂರು ಕಂಬಳದ, 9ನೇ ಆವೃತ್ತಿ, ಇಂದಿನಿಂದ ಎರಡು ದಿನಗಳ ಕಾಲ, ದಕ್ಷಿಣಕನ್ನಡ ಜಿಲ್ಲೆ, ಮಂಗಳೂರಿನ ಬಂಗ್ರಕೂಳೂರು, ಗೋಲ್ಡ್ ಫಿಂಚ್ ಸಿಟಿ, ರಾಮ–ಲಕ್ಷ್ಮಣ ಜೋಡು ಕರೆಯಲ್ಲಿ, ಆಯೋಜಿತವಾಗಿದೆ. ಇಂದು ಬೆಳಗ್ಗೆ 9 ಗಂಟೆಗೆ, ಗಣ್ಯರು ಕಂಬಳಕ್ಕೆ ಚಾಲನೆ ನೀಡಲಿದ್ದಾರೆ ಎಂದು, ಸಂಸದ ಬ್ರಿಜೇಶ್ ಚೌಟ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಕಾರವಾರದ, ಸೀ ಬರ್ಡ್ ನೌಕಾನೆಲೆಗೆ, ರಾಷ್ಟ್ರಪತಿ ದ್ರೌಪದಿ ಮುರ್ಮು, ನಾಳೆ ಭೇಟಿ.

2030ಕ್ಕೆ, ಪ್ರಯಾಣಿಕರಿಗೆ ಸಕಲ ಸೌಲಭ್ಯ ಕಲ್ಪಿಸುವ ಗುರಿಯೊಂದಿಗೆ, ರೇಲ್ವೆ ಸಾಮರ್ಥ್ಯ ವಿಸ್ತರಣೆ ಯೋಜನೆ.

ಧಾರವಾಡದಲ್ಲಿ, ಇಂದಿನಿಂದ ಐದು ದಿನಗಳ, ಅಂತರಂಗದ ನಡಿಗೆ; ಕೇಂದ್ರದ ಕ್ಷಮತಾ ಆಯೋಗದ ತಜ್ಞ ಸದಸ್ಯ, ಆರ್. ಬಾಲಸುಬ್ರಹ್ಮಣ್ಯಂ ನೇತೃತ್ವ.

ಮನ್ ಕಿ ಬಾತ್; ನಾಳೆ ಬೆಳಗ್ಗೆ 11 ಗಂಟೆಗೆ, ದೇಶದ ಜನತೆಯನ್ನುದ್ದೇಶಿಸಿ, ಪ್ರಧಾನಮಂತ್ರಿ ಭಾಷಣ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>